Register Number:
Date: 6/1/21 PM

ST. JOSEPH'S COLLEGE (AUTONOMOUS) BENGALURU – 560027

BSC. I st SEMESTER EXAMINATION JANUARY - 2021

## KAS 118 - KANNADA

Time: 2-30 hrs. Max. Marks: 70

This paper contains 2 printed pages and four parts

I. ಅ) ಒಂದರ ಭಾವಾರ್ಥವನ್ನು ಬರೆಯಿರಿ . 1X 5=5

1) ಹಡೆದೊಡಲು ಹುಡಿಯಾಯ್ತು ಮಗನೆ ಮಗನುಂಟೆಂದು
ಕಡಗಿ ಹೆಚ್ಚುವ ಮನಂ ಹೊತ್ತಿ ಹೊಗೆಯಿತ್ತು ಬಿಡ
ದಡರಿ ನಿಟ್ಟಿಸಿ ನಲಿವ ದಿಟ್ಟಿ ಕೆಟ್ಟುವು ಸೋಂಕಿ ಪುಳಕಿಸುವ ಕರಣಂಗಳು ॥
ಕಡಿವಡೆದು ವೊಸೆದು ಹೆಸಗೊಳುತಿಪ್ಪ ನಾಲಗೆಯ
ಕುಡಿ ಮುರುಟಿತೊಮ್ಮೊಮ್ಮೆ ನುಡಿಯನಾಲಿಪ ಕಿವಿಯ
ಹಡಿಗೆತ್ತುದಲೆ ಕಂದ ಎಂದೆನುತ್ತಿಂದುಮುಖಿ ಮುಱುಗಿ ಬಾಯ್ಬಿಟ್ಟಳಂದು ॥

2) ಒಕ್ಕಲ ಗೇರ್ಯಾಗ ಮಳೆರಾಜ
ಮಕ್ಕಳ ಮಾರ್‍ಯಾರು ಮಳೆರಾಜ
ಮಕ್ಕಳ ಮಾರಿ ರೊಕ್ಕ ಹಿಡಕೊಂಡು
ಭತ್ತ ಎಂತ ತಿರುಗ್ಯಾರು ಮಳೆರಾಜ

ಆ) ಮೂರನ್ನು ಸಂದರ್ಭ ಸಹಿತ ವಿವರಿಸಿ. 3X 5 = 15

3) ಎಂತಜೆಯಲಕ್ಕುಂ ಮನುಷ್ಯರ ಬಾೞುಂ
4) ನಿಜಸುತನ ಕಂಡಳು ಹರಿಶ್ಚಂದ್ರನರಸಿ ಹುತ್ತಿನ ಮೊದಲೊಳು
5) ಹಡೆದ ಬಾಣಂತಿಗೆ ಅನ್ನವಿಲ್ಲದಲೆ
ಏರುತಾವೆ ಮುಂಗೈಗೆ ಬಳೀ
6) ಒಂದು ಕೈ ನೀಡಿದಳು ನೆರವಿಗೆ,
ಒಂದು ತಬ್ಬಿತು ನಲ್ಲನ!
7) ನಿಮ್ಮ ಕುಲದ ನೆಲೆಯನೇನಾದರೂ ಬಲ್ಲಿರಾ
8) ಘೋರ ದುಃಖದ ನಾರಿಯನು ಬಳಿಕಾರು ನಗಿಸಲು ಬಲ್ಲರು?

II. ಎರಡು ಪ್ರಶ್ನೆಗಳಿಗೆ ವಿಮರ್ಶಾತ್ಮಕವಾಗಿ ಉತ್ತರ ಬರೆಯಿರಿ. 2 X 10 = 20

9) ಮಳೆಯಿಲ್ಲದಾಗಿನ ದುರಂತ ಚಿತ್ರಣವನ್ನು 'ಮಳೆರಾಜನ ಹಾಡು' ಕವಿತೆಯಲ್ಲಿ ಹೇಗೆ ಚಿತ್ರಿಸಲಾಗಿದೆ ? ವಿವರಿಸಿ.
10) 'ಕುಲ' ದ ಕುರಿತು ಕನಕದಾಸರ ನಿಲುವನ್ನು ವಿಶದೀಕರಿಸಿ.
11) ಪ್ರೀತಿಗಾಗಿ ಸಕಲವನ್ನೂ ತ್ಯಾಗ ಮಾಡಿದ ಕಾರಿಹೆಗ್ಗಡೆಯ ಮಗಳ ದರಂತದ ಕಥೆಯನ್ನು ವಿವರಿಸಿ.
12) ಮಗ ಲೋಹಿತಾಶ್ವನನ್ನು ಕಳೆದುಕೊಂಡು ದುಃಖಿಸುತ್ತಿರುವ ಚಂದ್ರಮತಿಯ ಪಾತ್ರವನ್ನು ಚಿತ್ರಿಸಿರಿ.

III. ನಾಲ್ಕು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ . 4X5 = 20

13) ತಲೆಮಾರು ಅಂತರದೊಂದಿಗೆ ಹೊಂದಿಕೊಳ್ಳಲು ಪಾಲಕರು ಪಾಲಿಸಬೇಕಾದ ಬದಲಾವಣೆಗಳ ಕುರಿತು ಬರೆಯಿರಿ.
14) ಕಾಡಿನಲ್ಲಿರುವ ಚಿಕ್ಕಪುಟ್ಟ ಹಕ್ಕಿಗಳ ಅಭ್ಯಾಸಗಳ ಕುರಿತು ಕಥೆಯ ಹಿನ್ನೆಲೆಯಲ್ಲಿ ವಿವರಿಸಿ.
15) ಕಾಳಹಬ್ಬದಲ್ಲಿ ಪಶುಪಾಲಕರು ಮಾಡಿಕೊಂಡು ಬಂದಿರುವ ಆಚರಣೆಗಳೇನು ?
16) ಅಪರಾಧಿ ಕಥೆಯಲ್ಲಿ ಬರುವ ಮಹಿಳಾ ಸಂವೇದನೆಯ ಕುರಿತು ಬರೆಯಿರಿ
17) ಒಂದು ಬಾಗಿಲು ಕಥೆಯಲ್ಲಿನ ಮನೆ ಕಟ್ಟುವ ಪ್ರಸಂಗವನ್ನು ನಿರೂಪಿಸಿ.
18) ಕಾಡುಗೊಲ್ಲರಲ್ಲಿರುವ ಮೂರು ಬಗೆಯ ಪೂಜಾರಿಗಳ ಕುರಿತು ಬರೆಯಿರಿ
19) ಸುಸ್ಮಿತ ಮತ್ತು ಹಕ್ಕಿ ಮರಿ ಕಥೆಯಲ್ಲಿ ಬರುವ ಸುಸ್ಮಿತಳ ಪಾತ್ರದ ಬಗ್ಗೆ ಬರೆಯಿರಿ.

IV. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ. 1x10= 10

20) ಕಾಡುಗೊಲ್ಲರು ಮರಗಿಡಗಳನ್ನು ಪೂಜಿಸಲು ಕಾರಣವೇನು?
21) ಒಂದು ಬಾಗಿಲು ಕತೆಯಲ್ಲಿ ಬರುವ ಬಿಳಿಕೂದಲ,ಸುಕ್ಕು ಮುಖದ,ಕುರುಡು ಕಣ್ಣಿನವಳು ಯಾರು?
22) ಕಾಳಹಬ್ಬದಲ್ಲಿ ಹುರಿಮೆಯನ್ನು ಬಡಿಯಲೇಬೇಕಾದ ಸಮುದಾಯ ಯಾವುದು?
23) ಒಂದು ಬಾಗಿಲು ಕತೆಯಲ್ಲಿ ಬರುವ ದುಭಾಷಿ ಯಾರು ?
24) ಹಕ್ಕಿಗಳು ಕ್ಯಾಮರಾವನ್ನು ಏನೆಂದು ತಿಳಿದಿದ್ದವು?
25) ಮೊಟ್ಟೆಗಳಿಗೆ ಕೃತಕವಾಗಿ ಕಾವುಕೊಟ್ಟು ಮರಿಮಾಡುವ ಸಾಧನದ ಹೆಸರೇನು?
26) ಅಪರಾಧಿ ಕತೆಯ ಕರ್ತೃ ಯಾರು?
27) ತಲೆಮಾರು ಅಂತರದ ಬಗ್ಗೆ ಸಮಾಜಶಾಸ್ತ್ರ ಅಭ್ಯಾಸ ಯಾವಾಗ ಬಂತು?
28) ತಲೆಮಾರು ಅಂತರ ಎಂದರೇನು ?
29) ಉನ್ನೀಸಾ ಯಾರಿಗೆ ಪತ್ರ ಬರೆದಳು?

---

KAS-118-A-20